ಓ.ಎಸ್.ನಂಬರಃ 102/2016

ಪಿಡಬ್ಲೂ-1

ದಿಃ 28-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು ಶ್ರೀ. ಪಿ ಆರ ಕೆ ವಕೀಲರಿಂದಃ**

ನಾನು 3ನೇ ತರಗತಿವರೆಗೂ ಓದಿರುತ್ತೇನೆ. ದಾವೆ ತಯಾರಿಸಲು ಮತ್ತು ಮುಖ್ಯ ವಿಚಾರಣೆ ತಯಾರಿಸಲು ನಾನು ಮತ್ತು ನನ್ನ ತಾಯಿ ಮಾಹಿತಿ ನೀಡಿದ್ದೇವೆ. ನನ್ನ ತಂದೆಯ ತಂಂದೆ ಬಾಹು ಸೂರ್ಯವಂಶಿ ತೀರಿಕೊಂಡಿರುತ್ತಾರೆ. ನನ್ನ ಅಜ್ಜಿ ಸುಂದ್ರಾಬಾಯಿ ಸಹ ತೀರಿಕೊಂಡಿರುತ್ತಾರೆ. ಅವರ ಮಕ್ಕಳುಗಳೇಂದರೆ, ಮಹಾದೇವ , ಗಣಪತಿ, ಶ್ರೀಪತಿ, ಜ್ಯೋತಿ , ಶಿವಾಜಿ , ಸದಾಶಿವ, ಲಕ್ಷ್ಮಣ , ಸಕ್ಕುಬಾಯಿ, ಅಂಬುಬಾಯಿ ಮತ್ತು ಅಕ್ಕುಬಾಯಿ ಎಂಬ ಮಕ್ಕಳು ಎಂದರೆ ಸರಿ. ಗಂಡು ಮಕ್ಕಳಲ್ಲಿ ಮಹಾದೇವ ಗಣಪತಿ, ಶ್ರೀಪತಿ, ಜ್ಯೋತಿ, ಶಿವಾಜಿ , ಲಕ್ಷ್ಮಣ ತೀರಿಕೊಂಡಿರುತ್ತಾರೆ ನಮ್ಮ ತಂದೆ ಸದಾಶಿವ ಮಾತ್ರ ಬದುಕಿದ್ದಾರೆ. ದಾವಾ ಆಸ್ತಿಗಳಿಗೆ ಟೆನೆನ್ಸಿ ಮುಖಾಂತರ ಬಂದಿರುತ್ತವೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ 16, 33, 34, 34/6 , 59/3, 135 , 276, 277 ಆಸ್ತಿಗಳು ಟೆನೆನ್ಸಿ ಮುಖಾಂತರ ಬಂದಿವೆ ಎಂದರೆ ಸರಿ. ನನ್ನ ತಂದೆ ಹಾಗೂ ಆತನ ಸಹೋದರರು ಒಟ್ಟಾಗಿ ಸೇರಿ ಫಾರ್ಮ ನಂಬರ 7 ಅರ್ಜಿಯನ್ನು ತುಂಬಿರುತ್ತಾರೆ ಹಾಗಾಗೀ ಆ ಜಮೀನುಗಳು ಟೆನೆನ್ಸಿ ಮುಖಾಂತರ ಬಂದಿರುತ್ತವೆ ಎಂದರೆ ಸರಿ. ನನ್ನ ಚಿಕ್ಕಪ್ಪಂದಿರು ತೀರಿಕೊಂಡ ನಂತರ ಆತನ ಮಕ್ಕಳ ಹೆಸರು ಪಹಣಿಯಲ್ಲಿ ಬರುತ್ತಿವೆ

ಎಂದರೆ ಸರಿ. ನನ್ನ ಚಿಕ್ಕಪ್ಪಂದಿರ ಮತ್ತು ದೊಡ್ಡಪ್ಪಂದಿರ ಎಲ್ಲಾ ಮಕ್ಕಳ ಹೆಸರು ಪಹಣಿ ಪತ್ರಿಕೆಯಲ್ಲಿ ಬರುತ್ತಿವೆ ಎಂದರೆ ಸರಿ. ನಮ್ಮ ಮತ್ತು ದೊಡ್ಡಪ್ಪಾ ಮತ್ತು ಚಿಕ್ಕಪ್ಪಂದಿರ ಮಕ್ಕಳ ನಡುವೆ ವಾಟ್ನಿ ಆಗಿಲ್ಲ ಎಂದರೆ ಸರಿ ಮತ್ತು ಯಾವುದೇ ವಾಟ್ನಿ ಪತ್ರ ಆಗಿಲ್ಲ ಎಂದರೆ ಸರಿ. ನಾವು ಮತ್ತು ಅವರು ಕಬ್ಜೆಯಲ್ಲಿ ಇದ್ದೇವೆ ಎಂದರೆ ಸರಿ ನಿಖರವಾದ ವೀಸ್ತೀರ್ಣ ನಿಗದಿ ಆಗಿಲ್ಲ ಎಂದರೆ ಸರಿ. ನನ್ನ ದೊಡ್ಡಪ್ಪಾ ಮತ್ತು ಚಿಕ್ಕಪ್ಪಂದಿರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರಲಿಲ್ಲ. ನಾನು ಹೇಳಿರುವ ಎಲ್ಲಾ ಆಸ್ತಿಗಳಲ್ಲಿ ನನ್ನ ದೊಡ್ಡಪ್ಪಾ ಮತ್ತು ಚಿಕ್ಕಪ್ಪಂದಿರ ಮಕ್ಕಳ ಹೆಸರುಗಳು ಇವೆ ಎಂದರೆ ಸರಿ . ನಮ್ಮ ತಂದೆ ಸಾಕಷ್ಟು ಖರ್ಚು ಮಾಡಿ ನನ್ನ ಮದುವೆ ಮಾಡಿದ್ದಾರೆಂದರೆ ಸರಿಯಲ್ಲ. ನಮ್ಮ ತಂದೆ ಸಾಕಷ್ಟು ವಸ್ತ್ರ ಒಡವೆ ಪಾತ್ರೆ ಪಗಡೆ ಕೊಟ್ಟು ಮದುವೆ ಮಾಡಿದ್ದಾರೆಂದರೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಮಧ್ಯೆ ವೈಮಸ್ಸು ಇದೆ ಎಂದರೆ ಸರಿ . ನಮ್ಮ ಮತ್ತು ನಮ್ಮ ತಂದೆ ಹಾಗೂ ಸಹೋದರರನ ಮದ ಕ್ರಿಮಿನಲ್ ಕೇಸಗಳು ಇವೆ ಎಂದರೆ ಸರಿ. ನನ್ನ ತಾಯಿ ಹೆಣ್ಣು ಮಕ್ಕಳ ಪರವಾಗಿ ತಂದೆ ಗಂಡು ಮಕ್ಕಳ ಪರವಾಗಿ ನಿಂತಿದ್ದಾರೆ ಎಂದರೆ ಸರಿ. ಆದ್ದರಿಂದ ಈ ದಾವೆ ಹಾಕಿದ್ದೇವೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶಕೋರಿದ್ದರಿಂದ ಮುಂದುವರೆದ ಪಾಟೀ ಸವಾಲು ಮೂಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ